# ನೋಟೀಫಿಕೇಷನ್

ದಿನಾಂಕ : 12.10.2022

ವಿಷಯ: ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಘಟಕದಲ್ಲಿನ ದ್ವಿ.ದ.ಸ., / ಬೆರಳಚ್ಚುಗಾರರು ಹಾಗೂ ಬೆರಳಚ್ಚು – ನಕಲುಗಾರರ ಹುದ್ದೆಯಿಂದ ಪ್ರ.ದ.ಸ., ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ: 1. ಗೌರವಾನ್ವಿತ ಭಾರತದ ಸರ್ವೋಚ್ಛ ನ್ಯಾಯಾಲಯ, ದೆಹಲಿ ಇವರ ಸಿವಿಲ್ ಅಪೀಲ್ ಸಂ. 2368/2011, ದಿ. 09.02.2017 ರಲ್ಲಿನ ಹಾಗೂ ದಿ. 10.05.2019 ರಲ್ಲಿನ ಆದೇಶ.

2. ಈ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ನಿರ್ವಹಿಸುತ್ತಿರುವ ದ್ವಿ.ದ.ಸ.,/ಬೆರಳಚ್ಚುಗಾರರು/ಬೆರಳಚ್ಚು ನಕಲುಗಾರರ ಹುದ್ದೆಗಳಲ್ಲಿನ ನೌಕರರುಗಳ 2019 ರ ಪರಿಷ್ಕೃತ ಜೇಷ್ಠತಾ ಪಟ್ಟಿ.

3. ದಿ: 31.05.2022 ರ ಖಾಲಿ ಇರುವ ನೌಕರರುಗಳ ಮಾಸಿಕ ತಃಖ್ತೆ

---

ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಒಟ್ಟು 06 ಪ್ರ.ದ.ಸ., ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿದ್ದು ಸದರಿ ಹುದ್ದೆಗಳಲ್ಲಿ 01 ಹುದ್ದೆಯು ಕೌಟುಂಬಿಕ ನ್ಯಾಯಾಲಯದ ಹುದ್ದೆಯಾಗಿದ್ದು ಉಳಿದ 05 ಹುದ್ದೆಗಳು ಖಾಲಿಯಾಗಿರುತ್ತದೆ.

ಮುಂದುವರೆದು, ಮೇಲ್ಕಂಡ 05 ಹುದ್ದೆಗಳನ್ನು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳ) (ನೇಮಕಾತಿ) ನಿಯಮಗಳು 1982 ರಂತೆ ದ್ವಿ.ದ.ಸ., / ಬೆರಳಚ್ಚುಗಾರರು / ಬೆರಳಚ್ಚು - ನಕಲುಗಾರರ ಹುದ್ದೆಯ ಜೇಷ್ಠತಾ ಪಟ್ಟಿಯಲ್ಲಿ ಮೇಲ್ಪಂಕ್ತಿಯಲ್ಲಿರುವ ನೌಕರರಿಂದ ಸದರಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬ ಬೇಕಾಗಿರುತ್ತದೆ.

ಮುಂದುವರೆದು, ಈ ಹಿಂದೆ ದ್ವಿ.ದ.ಸ., / ಬೆರಳಚ್ಚುಗಾರರು / ಬೆರಳಚ್ಚು - ನಕಲುಗಾರರ ಹುದ್ದೆಯಿಂದ ಪ್ರ.ದ.ಸ., ಹುದ್ದೆಗೆ ನೀಡಲಾದ ಮುಂಬಡ್ತಿಯು ರೋಸ್ಟರಿನ II Cycle – 17 ನೇ ಬಿಂದುವಿಗೆ ಅಂದರೆ ಶ್ರೀಮತಿ ಆರ್, ಶ್ರೀಮತಿ, ಇವರಿಗೆ ಅಂತ್ಯಗೊಂಡಿರುತ್ತದೆ. **ಈಗ ಮುಂಬಡ್ತಿಯನ್ನು ರೋಸ್ಟರಿನ II Cycle – 18 ನೇ ಬಿಂದುವಿನಿಂದ ಪ್ರಾರಂಭಿಸಬೇಕಾಗಿರುತ್ತದೆ.**

ಮುಂದುವರೆದು, ಹೀಗೆ ತೆರವಾಗಿರುವ ಒಟ್ಟು 05 ಪ್ರ.ದ.ಸ. ಹುದ್ದೆಗಳನ್ನು ತುಂಬಲು ದ್ವಿ.ದ.ಸ. / ಬೆರಳಚ್ಚುಗಾರ / ಬೆರಳಚ್ಚು - ನಕಲುಗಾರರ ಹುದ್ದೆಯಲ್ಲಿನ ನೌಕರರುಗಳ ಸಾಮಾನ್ಯ ಪರಿಷ್ಕೃತಾ ಜೇಷ್ಠತಾ ಪಟ್ಟಿಗೆ ಅನುಗುಣವಾಗಿ ಮೊದಲ ಐದು ನೌಕರರುಗಳ ಸೇವಾ ಪುಸ್ತಕಗಳು, ಸೇವಾ ವಿವರಗಳು, ಕರ್ತವ್ಯ ನಿರ್ವಹಣಾ ವರದಿ ಹಾಗೂ ನೌಕರರುಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯಿಂದ ಪ್ರ.ದ.ಸ., ಹುದ್ದೆಗೆ ಮುಂಬಡ್ತಿ ಪಡೆದರೂ ಸಹ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯಲ್ಲಿನ ಕರ್ತವ್ಯವನ್ನು ಸಹ ನಿರ್ವಹಿಸುತ್ತೇವೆ ಎಂಬ ಒಪ್ಪಿಗೆ ಪತ್ರಗಳನ್ನು ಈ ಕೆಳಕಂಡ ನೌಕರರುಗಳು ನೀಡಲು ಒಪ್ಪಿರುತ್ತಾರೆ. ಆ ಒಪ್ಪಿಗೆಯ ಪತ್ರ ನೀಡಲು ಒಪ್ಪಿರುವ ಕಾರಣಕ್ಕಾಗಿ ಈ ಕೆಳಕಂಡ ಮುಂಬಡ್ತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ರೋಸ್ಟರ್ ಬಿಂದು | ನೌಕರರ ಹೆಸರು ಮತ್ತು ಪದನಾಮ | ನೌಕರರ ಮೀಸಲಾತಿ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ನ್ಯಾಯಾಲಯ |
|---|---|---|---|---|
| 1 | II Cycle – 18 ( unreserved) | ಪದ್ಮ ಎಸ್, ಬೆರಳಚ್ಚುಗಾರರು, | SC | ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ, |

| | | | | |
|---|---|---|---|---|
| 2 | II Cycle – 19 ( unreserved) | ಕೃಷ್ಣಕುಮಾರಿ ಜಿ, ಬೆರಳಚ್ಚುಗಾರರು, | - | ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ಕೊಳ್ಳೇಗಾಲ (ನಿಯೋಜನೆ ಮೇರೆಗೆ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮು.ನ್ಯಾ.ದಂ.ರವರ ನ್ಯಾಯಾಲಯ, ಚಾಮರಾಜನಗರ) |
| 3 | II Cycle – 20 ( unreserved) | ಎನ್. ನಾಗಮ್ಮ, ಬೆರಳಚ್ಚುಗಾರರು, | SC | ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ಕೊಳ್ಳೇಗಾಲ |
| 4 | II Cycle – 22 ( unreserved) | ಸಿಂದಿಯಾ ಕೆ., ಬೆರಳಚ್ಚುಗಾರರು | - | ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ಯಳಂದೂರು (ನಿಯೋಜನೆ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಾಮರಾಜನಗರ) |
| 5 | II Cycle – 21 (SC) | ಸುರೇಶ್ ಎಸ್, ಬೆರಳಚ್ಚು - ನಕಲುಗಾರರು | SC | ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮು.ನ್ಯಾ.ದಂ., ರವರ ನ್ಯಾಯಾಲಯ, ಚಾಮರಾಜನಗರ (ನಿಯೋಜನೆ ಮೇರೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ) |

ಮೇಲ್ಕಂಡಂತೆ ಎಲ್ಲಾ ವಿಷಯಗಳನ್ನು ನಾನು ಪರಿಗಣಿಸಿ ಮೇಲ್ಕಂಡ 5 ನೌಕರರರಿಗೆ ಪ್ರ.ದ.ಸ ಹುದ್ದೆಗೆ ಮುಂಬಡ್ತಿ ಡಿ ಆದೇಶ ಹೊರಡಿಸಲಾಗಿದೆ.

12/10

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
ಚಾಮರಾಜನಗರ